ಶ್ರೀ ಜೆ ಎಚ್. ಪಟೇಲ್.—ಸರ್ಕಾರ ಕಾರ್ಖಾನೆಗೆ ಅನುಮತಿಯನ್ನು ಕೊಡುವುದಕ್ಕಿಂತ ಮುಂಚೆ ಪರಿಸರ ಮಾಲಿನ್ಯವನ್ನು ನಿಯಂತ್ರಣ ಮಾಡತಕ್ಕಂತಹ ಸಮಿತಿಯ ಅಭಿಪ್ರಾಯವನ್ನು ಪಡದೇ ನಂತರ ಅವುಗಳಿಗೆ ಅನುಮತಿಯನ್ನು ಕೊಡತಕ್ಕಂತಹದ್ದು. ಆದರೆ ಈಗ ಮಾನ್ಯ ಸದಸ್ಯರು ಹೇಳತಕ್ಕಂತಹ ವಿಚಾರದಲ್ಲಿ ಮತ್ತೊಮ್ಮೆ ಪರಿಸರ ಮಾಲಿನ್ಯದ ಸಮಿತಿಯವರ ಅಭಿಪ್ರಾಯವನ್ನು ಪಡೆದು ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಘಟಪ್ರಭಾ ಪುನರ್ ನಿವೇಶನ ಕೇಂದ್ರದಲ್ಲಿ ಕುಡಿಯುವ ನೀರಿನ ತೊಂದರೆ

ಶ್ರೀ ಎಂ. ಎಸ್. ಪಾಟೀಲ್.— ಹುಕ್ಕೇರಿ ತಾಲ್ಲೂಕಿನ ಘಟಪ್ರಭಾ ಪುನರ್ ನಿವೇಶನ ಕೇಂದ್ರದಲ್ಲಿ ಕುಡಿಯುವ ನೀರಿನ ತೊಂದರೆ, ಒಕ್ಕಲುತನದ ಪ್ಲಾಟುಗಳಿಗೆ ಹೋಗುವ ದಾರಿಯ ನಿರ್ಮಾಣ, ಸ್ಮಶಾನ ಕ್ಕಾಗಿ ನಿಗದಿ ಮಾಡಿದ ಸ್ಥಳ ತೋರಿಸುವುದು, ಹಾಗೂ ದಡ್ಡಿ–ನಾಗನೂರ್ ಪುನರ್ನಿವೇಶನ ಕೇಂದ್ರದ ಯಾತ ನೀರಾವರಿ ಕಾಮಗಾರಿಯನ್ನು ತ್ವರಿತವಾಗಿ ಪ್ರಾರಂಭಿಸುವುದು. ಈ ವಿಷಯಗಳನ್ನು ಸರ್ಕಾರದ ಇಲಾಖೆಯಿಂದ ಗಣನೆಗೆ ತೆಗೆದುಕೊಳ್ಳದೆ ಇರುವುದರಿಂದ, ಆದಷ್ಟು ಶೀಘ್ರವಾಗಿ ಇವುಗಳನ್ನು ಗಣನೆಗೆ ತೆಗೆದುಕೊಳ್ಳುವಂತೆ ಮಾಡಬೇಕೆಂದು ಸರ್ಕಾರವನ್ನು ಈ ಮೂಲಕ ಒತ್ತಾಯಿಸುತ್ತಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.— ಈ ಸಮಸ್ಯೆಯನ್ನು ಬಗೆಹರಿಸುತ್ತೇನೆ

ಚಿತಾಪುರದಲ್ಲಿ ತರಕಾರಿ ಮಾರ್ಕೆಟ್‌ಗೆ ನಿವೇಶನವನ್ನು ಕಾಮಗಾರಿ ಇಲಾಖೆಯಿಂದ ಟೌನ್ ಮುನಿಸಿಪಲ್ ಕೌನ್ಸಿಲ್‌ಗೆ ವರ್ಗಾಯಿಸುವುದು.

ಶ್ರೀ ಕೆ. ಬಿ. ಶಾನಪ್ಪ.— ಇದು ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರಿಗೆ ಸಂಬಂಧ ಪಟ್ಟದ್ದು. ಗುಲ್ಬರ್ಗ ಜಿಲ್ಲೆಯಲ್ಲಿ ಚಿತಾಪುರ ತಾಲ್ಲೂಕು ಒಂದು ತಾಲ್ಲೂಕು. ಅಲ್ಲಿ ೨–೩ ವರ್ಷಗಳಿಂದ ತರಕಾರಿ ಮಾರತಕ್ಕಂತಹ ಜನ ಅವರಿಗೆ ಮಾರ್ಕೆಟಿಂಗ್ ಸೌಲಭ್ಯ ಬೇಕಾಗಿದೆ. ಅಲ್ಲಿದ್ದ ಲೋಕೋಪಯೋಗಿ ಇಲಾಖೆಗೆ ಸೇರಿದ ಒಂದು ಸಣ್ಣ ನಿವೇಶನವನ್ನು ಪುರಸಭೆಯವರ ವಶಕ್ಕೆ ಕೊಡಲು ಬೇಡಿಕೊಂಡಿದ್ದರೂ ಅದು ಇದುವರೆವಿಗೂ ಅವರ ವಶಕ್ಕೆ ಬಂದಿಲ್ಲ. ಇದಕ್ಕಾಗಿ ಲೋಕೋಪಯೋಗಿ ಇಲಾಖೆಯವರು ೪೦ ಸಾವಿರ ರೂಪಾಯಿಗಳನ್ನು ಪುರಸಭೆಯವರು ತುಂಬ ಬೇಕೆಂಬ ಒಂದು ಪರತ್ತನ್ನು ಹಾಕಿದ್ದಾರೆ. ಇದರ ಬಗ್ಗೆ ಮಂತ್ರಿಗಳಿಗೂ ಕೂಡ ಬರೆದದ್ದಾಯಿತು. ವಿಶ್ವನಾಥ ಪಾಟೀಲ್‌ರವರೂ ಕೂಡ ಇದರ ಬಗ್ಗೆ ಆಸಕ್ತಿವಹಿಸಿ ಕಳೆದ ೨–೩ ವರ್ಷಗಳಿಂದಲೂ ಪ್ರಯತ್ನ ಮಾಡುತ್ತಿದ್ದಾರೆ. ಪುರಸಭೆಯವರು ಲೋಕೋಪಯೋಗಿ ಇಲಾಖೆಯವರು ಕೇಳಿದ ೪೦ ಸಾವಿರ ರೂಪಾಯಿಗಳನ್ನು ಪ್ರತಿ ವರ್ಷ ೧೦ ಸಾವಿರ ರೂಪಾಯಿಗಳಂತೆ ೪ ವರ್ಷದಲ್ಲಿ ತುಂಬಿ ಕೊಡುತ್ತೇವೆಂದೂ ಕೂಡ ಒಪ್ಪಿದ್ದಾರೆ. ಇದರ ಬಗ್ಗೆ ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.— ಈ ನಿವೇಶನ ನಾನು ಇದುವರೆವಿಗೂ ನಗರಾಡಳಿತ ಸಚಿವರಿಗೆ ಸಂಬಂಧಪಟ್ಟದ್ದು ಎಂಬುದಾಗಿ ತಿಳಿದುಕೊಂಡಿದ್ದೆ. ಆದರೆ ಮಾನ್ಯ ಸದಸ್ಯರು ಹೇಳಿದ್ದರಿಂದ ಈಗ ಅರ್ಥವಾಗಿದೆ. ಲೋಕೋಪಯೋಗಿ ಇಲಾಖೆಯಿಂದ ಪುರಸಭೆಗೆ ಆ ನಿವೇಶನ ವರ್ಗಾವಣೆಯಾಗಬೇಕು, ಇದರ ಬಗ್ಗೆ ನಾನೂ ಮಾನ್ಯ ನಗರಾಡಳಿತ ಸಚಿವರು ಹಾಗೂ ಸನ್ಮಾನ್ಯ ಸದಸ್ಯರು ಕಳಿತುಕೊಂಡು ಅಧಿಕಾರಿಗಳನ್ನು ಕರೆಯಿಸಿ ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಸೋಮವಾರ ಪೇಟೆ ತಾಲ್ಲೂಕಿನಲ್ಲಿ ಕಾಡಾನೆಗಳ ಹಾವಳಿ

ಶ್ರೀ ಡಿ. ಎ. ಜಿನ್ನಪ್ಪ.— ಮಾನ್ಯ ಅಧ್ಯಕ್ಷರೇ, ಸೋಮವಾರಪೇಟೆ ತಾಲ್ಲೂಕು ಬಿಟ್ಟಿಪುರ, ಅಗಳಿ ಕೋಟಿಗನಹಳ್ಳಿ, ಇಷ್ಟುಎಳಲೆ, ಬಾಜಾಪುರ ಹಾಗೂ ಬೇಸೂರು ಪಂಚಾಯ್ತಿಗೆ ಸೇರಿದ ಗ್ರಾಮಗಳಲ್ಲಿ ಕಾಡಾನೆಗಳ ಹಾವಳಿ ತೀವ್ರವಾಗಿದ್ದು ನಾಗರೀಕರ ಆಸ್ತಿ ಪಾಸ್ತಿಗಳಿಗೆ ತುಂಬಾ ಹಾನಿಯಾಗಿದ್ದು ಈ ರೀತಿಯ ಹಾವಳಿ ಸುಮಾರು ೪ ತಿಂಗಳಿಂದ ನಡೆಯುತ್ತಿದೆ. ಇದರಿಂದ ಲಕ್ಷಗಟ್ಟಲೆ ಆಸ್ತಿ ಪಾಸ್ತಿ ನಷ್ಟವಾಗಿದೆ. ಇದರ ಸರ್ವೆ ನಂಬರ್ ೧೨೫ : ೯೧, ೧೨೨, ೧೨೩ : ೧, ೧೨೫ : ೧೪೯, ೧೨೫ : ೧೫೦ : ೪